**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**

**ಪಿ.ಸಿ.ಆರ್. ನಂ.4913/2026 ಸಿಡಬ್ಲ್ಯು -1**

| | |
|---|---|
| **ಸಾಕ್ಷಿದಾರರ ಹೆಸರು** | ಕಲ್ವ ಯಶವಂತ್, |
| **ತಂದೆಯ ಹೆಸರು** | ಕಲ್ವ ಹರಿಶಂಕರ್, |
| **ವಯಸ್ಸು** | 40 ವರ್ಷ |
| **ಉದ್ಯೋಗ** | ಸಾಫ್ಟ್ ವೇರ್ ಇಂಜಿನಿಯರ್, |
| **ವಾಸ** | ಸರ್ಜಾಪುರ ರೋಡ್, ಬೆಂಗಳೂರು |
| **ಪ್ರಮಾಣೀಕರಿಸಿದ ದಿನಾಂಕ** | 02.07.2026 |

**ಭಾ.ನಾ.ಸು.ಸಂ.ಕಲಂ.223 ರಡಿಯಲ್ಲಿ ಸಾಕ್ಷಿಗೆ ಪ್ರಮಾಣ ಪೂರ್ವಕ ಹೇಳಿಕೆಃ**

ಒಂದನೇ ಆರೋಪಿ ನನ್ನ ಹೆಂಡತಿ. ನಾನು ಮತ್ತು ಒಂದನೇ ಆರೋಪಿಯು ಡಿಸೆಂಬರ್ 2011 ರಲ್ಲಿ ಕಾರ್ನೂಲ್ ಜಿಲ್ಲೆ, ಆಂಧ್ರಪ್ರದೇಶ ರಾಜ್ಯದಲ್ಲಿ ಆಗಿರುತ್ತದೆ. ನಮ್ಮ ದಾಂಪತ್ಯದ ಪ್ರತಿಫಲವಾಗಿ 2015 ರಲ್ಲಿ ಒಂದು ಹೆಣ್ಣು ಮಗಳು ಮಂಜು ನೇತ್ರಾ ಕಲ್ವ ಜನಿಸಿರುತ್ತಾಳೆ. ಎರಡನೇ ಮಗಳು ಪೂರ್ವಿಕ ಕಲ್ವ ಡಿಸೆಂಬರ್ 2016 ರಲ್ಲಿ ಜನಿಸಿರುತ್ತಾಳೆ. ನಂತರ ನಾನು ಸರ್ಜಾಪುರ ರೋಡ್ ನಲ್ಲಿ ಒಂದು ಸ್ವಂತ ಮನೆಯನ್ನು ಕಟ್ಟಿರುತ್ತೇನೆ. ಆಗಸ್ಟ್ 2022 ತಿಂಗಳಿನಿಂದ ನನ್ನ ಹೆಂಡತಿಯು ಸಣ್ಣ ಪುಟ್ಟ ವಿಚಾರಗಳಿಗೆ ಗಲಾಟೆ ಮಾಡುತ್ತಿದ್ದಳು. 2023 ರಲ್ಲಿ ನನ್ನ ಹೆಂಡತಿ ಮಕ್ಕಳನ್ನು ಬಿಟ್ಟು ಆಕೆ ಒಬ್ಬಳೇ ಟ್ರಿಪ್ ಹೋಗುತ್ತಿದ್ದಳು. ಅದನ್ನು ನಾನು ಪ್ರಶ್ನಿಸಿದಾಗ ಆಕೆ ನನ್ನ ಮೇಲೆ ಗಲಾಟೆ ಮಾಡುತ್ತಿದ್ದಳು. ಅದೇ ರೀತಿ ನನ್ನ ಹೆಂಡತಿ ಪ್ರತಿ ದಿನ ರಾತ್ರಿ ಯಾರಿಗೋ ಫೋನ್ ಮಾಡುತ್ತಿದ್ದಳು. ಅದನ್ನು ನಾನು ಪ್ರಶ್ನಿಸಿದಾಗ ನನ್ನ ಮೇಲೆ ಗಲಾಟೆ ಮಾಡುತ್ತಿದ್ದಳು. ಆ ನಂತರ ನನಗೆ ಗೊತ್ತಾಯಿತು, ಆಕೆಯು ಪುಣೆಯಲ್ಲಿರುವ ಒಬ್ಬ ವ್ಯಕ್ತಿಯ ಜೊತೆ ಅನೈತಿಕವಾಗಿ ಸಂಬಂಧವನ್ನು ಹೊಂದಿದ್ದಳು. ಅದನ್ನು ನಾನು ಪ್ರಶ್ನಿಸಿದಾಗ ಒಂದನೇ ಆರೋಪಿಯ ನನಗೆ ಮತ್ತು ನನ್ನ ತಂದೆಗೆ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತಾರೆ. ನಂತರ ನನ್ನ ಹೆಂಡತಿ ನನ್ನ ಮಕ್ಕಳನ್ನು ಕರೆದುಕೊಂಡು

ಮನೆಯನ್ನು ಬಿಟ್ಟು ಹೋಗಿರುತ್ತಾಳೆ. ಆದರೆ ನಾನು ಆಕೆಗೆ ಯಾವುದೇ ರೀತಿ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡದೇ ಇದ್ದರೂ ಸಹ ನನ್ನ ವಿರುದ್ದ ಸುಳ್ಳು ದೂರನ್ನು ನೀಡಿರುತ್ತಾರೆ.

2. ಸುಮಾರು 10 ವರ್ಷಗಳ ಹಿಂದೆಯೇ ನಾನು ನನ್ನ ಹೆಸರಿನಲ್ಲಿ ಸ್ಟೇಟ್ ಆಫ್ ಇಂಡಿಯಾ, ಪನ್ನತ್ತೂರು ಶಾಖೆಯಲ್ಲಿ ಒಂದು ಲಾಕರ್ ನ್ನು ಓಪನ್ ಮಾಡಿ ಅದರಲ್ಲಿ 50 ತೋಲಾ ಚಿನ್ನವನ್ನು ಇಟ್ಟಿರುತ್ತೇನೆ. ಸದರಿ ಚಿನ್ನವೂ ನನ್ನ, ತಂದೆ ತಾಯಿ ಮತ್ತು ನನ್ನ ಅಜ್ಜಿಯವರಿಗೆ ಸೇರಿರುತ್ತದೆ. ಮೇ 2025 ರಲ್ಲಿ ನನ್ನ ಹೆಂಡತಿ ಅಂದರೆ ಆರೋಪಿಯು ಮನೆಯ ಲಾಕರ್ ನಲ್ಲಿದ್ದ ಕೀನ್ನು ತೆಗೆದುಕೊಂಡು ಹೋಗಿ ಬ್ಯಾಂಕಿನಲ್ಲಿರುವ ಲಾಕರ್ ನ್ನು ನನಗೆ ತಿಳಿಸದೇ ಓಪನ್ ಮಾಡಿ ಅದರಲ್ಲಿದ್ದ ಚಿನ್ನವನ್ನು ತೆಗೆದುಕೊಂಡು ಹೋಗಿರುತ್ತಾಳೆ. ಒಂದನೇ ಆರೋಪಿಯು ಈ ಮೇಲ್ಕಂಡ 50 ತೋಲಾ ಚಿನ್ನವನ್ನು ತೆಗೆದುಕೊಂಡು ಹೋಗಿ ನನಗೆ ನಂಬಿಕೆ ದ್ರೋಹ ಮತ್ತು ಮೋಸ ಉಂಟ ಮಾಡಿರುತ್ತಾಳೆ. ಆ ಬಗ್ಗೆ ನಾನು ಎಸ್.ಬಿ.ಐ ಪನ್ನತ್ತೂರ್ ಶಾಖೆಗೆ ಒಂದು ದೂರನ್ನು ಮೇಲ್ ಮೂಲಕ ನೀಡಿರುತ್ತೇನೆ. ಆದರೆ ಅವರು ನನಗೆ ಯಾವುದೇ ಪ್ರತಿಕ್ರಿಯೇಯನ್ನು ನೀಡಿರುವುದಿಲ್ಲ. ಆ ನಂತರ ನಾನೇ ಖುದ್ದಾಗಿ ಬ್ಯಾಂಕಿಗೆ ಹೋಗಿ ಲಿಖಿತವಾಗಿ ದೂರನ್ನು ನೀಡಿರುತ್ತೇನೆ. ಆಗಾಲೂ ಸಹ ಎರಡನೇ ಆರೋಪಿಯಾದ ಬ್ಯಾಂಕಿನವರು ಯಾವುದೇ ಪ್ರತಿಕ್ರಿಯೆ ಯನ್ನು ನೀಡಿರುವುದಿಲ್ಲ. ನಂತರ ನಾನು ಆರ್.ಬಿ.ಐ (ಒಂಬುಡ್ಸ್‌ಮನ್)ನವರಿಗೆ ದೂರನ್ನು ನೀಡಿರುತ್ತೇನೆ. ನಂತರ ಆರ್.ಬಿ.ಐ (ಒಂಬುಡ್ಸ್‌ಮನ್) ರವರು ನನ್ನ ಕೇಸನ್ನು ಮುಕ್ತಾಯಗೊಳಿಸಿ ಕೇವಲ ರೂ.10,000/- ಪರಿಹಾರ ಹಣವನ್ನು ನೀಡಿರುತ್ತಾರೆ. ನಂತರ ನಾನು ಮಾರತ್ತಹಳ್ಳಿ ಪೊಲೀಸ್ ಠಾಣೆಗೆ ಹೋಗಿ ಲಿಖಿತ ದೂರನ್ನು ನೀಡಿರುತ್ತೇನೆ. ನಂತರ ಪೊಲೀಸರು ನನ್ನ ದೂರನ್ನು ಸ್ವೀಕರಿಸಿ ಹಿಂಬರಹವನ್ನು ನೀಡಿರುತ್ತಾರೆ. ನಂತರ ನಾನು ಮಾನ್ಯ ಡಿಸಿಪಿ ರವರಿಗೆ ಇಮೇಲ್ ಮೂಲಕ ದೂರನ್ನು ಸಲ್ಲಿಸಿರುತ್ತೇನೆ. ಅವರು ಸಹ ಎನ್ ಸಿಆರ್ ನೀಡಿರುತ್ತಾರೆ. ಎರಡನೇ ಆರೋಪಿಯಾದ ಬ್ಯಾಂಕಿನವರು ಒಂದನೇ ಆರೋಪಿಯ ಜೊತೆ ಸೇರಿಕೊಂಡು ನನಗೆ ತಿಳಿಸದೇ ನನ್ನ ಲಾಕರ್ ನ್ನು ಓಪನ್ ಮಾಡಿ ನನ್ನ ಹೆಂಡತಿ ಅಂದರೆ ಒಂದನೇ ಆರೋಪಿಗೆ ನನ್ನ ಚಿನ್ನವನ್ನು ನೀಡಿ ನನಗೆ ನಂಬಿಕೆ ದ್ರೋಹ ಮತ್ತು ಮೋಸ ಉಂಟು ಮಾಡಿರುತ್ತಾರೆ. ಆದರೆ

ಆರೋಪಿತರ ವಿರುದ್ದ ಯಾವುದೇ ಸೂಕ್ತ ಕಾನೂನು ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ನಾನು ಈ ನ್ಯಾಯಾಲಯದಲ್ಲಿ ಖಾಸಗಿ ದೂರು ಸಲ್ಲಿಸಿರುತ್ತೇನೆ.

***ಮುಂದುವರೆದ ಸತ್ಯಪ್ರಮಾಣ ಹೇಳಿಕೆಗಾಗಿ ಸಮಯ ಕೋರಿದ್ದರಿಂದ ಮುಂದೂಡಲಾಯಿತು.***

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**